ಕರ್ನಾಟಕ ಸರ್ಕಾರ
# ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)
ಆರೋಗ್ಯ ಸೌಧ, 7 ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560 023
ದೂರವಾಣಿ ಸಂಖ್ಯೆ: 080-22536200. ಫ್ಯಾಕ್ಸ್ ಸಂ:080-22536221.
ಸಹಾಯವಾಣಿ:1800 425 8330. ಆರೋಗ್ಯ ಮಿತ್ರ ಸಹಾಯವಾಣಿ: 1800 425 2646.
E-mail: directorsast@gmail.com, ed.sast-hfw@karnataka.gov.in

ಸಂ: ಆಕುಕ/ಎಸ್.ಎ.ಎಸ್.ಟಿ/KASS/27/2023-24 ದಿನಾಂಕ: 30.09.2025

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ16ಎಸ್ಎಂಆರ್ 2020, ದಿನಾಂಕ: 02.04.2025.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ16 ಎಸ್ಎಂಆರ್2020, ದಿನಾಂಕ: 23.09.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಸದಸ್ಯರಿಗೆ ನಗದು ರಹಿತ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಉಲ್ಲೇಖಿತ (2) ರನ್ವಯ ಅಕ್ಟೋಬರ್ 01. 2025 ಜಾರಿಗೊಳಿಸಲು ಹಾಗೂ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಬಂದ ದಿನಾಂಕದಿಂದ ಪ್ರಸ್ತುತ ಜಾರಿಯಲ್ಲಿರುವ ಜ್ಯೋತಿ ಸಂಜೀವಿನಿ ಯೋಜನೆಯು ಸ್ಥಗಿತಗೊಳ್ಳುವುದು ಎಂದು ಸರ್ಕಾರವು ಆದೇಶಿಸಲಾಗಿದೆ. ಅದರಂತೆ ನೊಂದಾಯಿತ ಆಸ್ಪತ್ರೆಗಳಿಗೆ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಲಾಗಿದೆ.

1. ಆಸ್ಪತ್ರೆಗಳು ಈಗಾಗಲೇ ಒಡಂಬಡಿಕೆ (MoU) ಸಲ್ಲಿಸಿರುವ ಹಾಗೂ ಅನುಮೋದನೆಗೊಂಡಿರುವ ಆಸ್ಪತ್ರೆಗಳಲ್ಲಿ KASS ಫಲಾನುಭವಿಗಳಿಗೆ ನಗದು ರಹಿತ ಚಿಕಿತ್ಸೆಯನ್ನು ನೀಡುವುದು.
2. KASS ಯೋಜನೆಯಡಿಯಲ್ಲಿ ನೊಂದಾಯಿಸಲ್ಪಟ್ಟ ಫಲಾನುಭವಿಗಳಿಗೆ ಮಾತ್ರ ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಗೆ ಚಿಕಿತ್ಸೆಯನ್ನು ನೀಡಿ KASS ಯೋಜನೆಯಡಿಯಲ್ಲಿ ನೊಂದಾವಣೆ ಮಾಡಿಕೊಳ್ಳಲು 48 ಗಂಟೆಗಳ ಕಾಲಾವಕಾಶ ಕಲ್ಪಿಸಿಕೊಡುವುದು. ಒಂದು ವೇಳೆ 48 ಗಂಟೆಗಳಲ್ಲಿ ನೊಂದಣಿ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಯೋಜನೆಯಡಿಯಲ್ಲಿ ಪರಿಗಣಿಸದೇ ಇರುವುದು.
3. ಸು.ಆ.ಸು.ಟ್ರ ತಂತ್ರಾಂಶ ಹಾಗೂ Workflow ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿಯಲ್ಲಿ ಮುಂದುವರೆಯುವುದು. (https://sast.karnataka.gov.in)
4. ದಿನಾಂಕ: 01.10.2025 ರಿಂದ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನಗದು ರಹಿತ ಚಿಕಿತ್ಸೆಗೆ ಸಂಬಂಧಿಸಿದಂತೆ Pre-authorization ಸಲ್ಲಿಸಲು ಅನುಮತಿಸಲಾಗಿದೆ. ಅದರಂತೆ ಚಿಕಿತ್ಸೆ ಪಡೆದಂತಹ (Discharge) ಕ್ಲೈಮ್ ಗಳನ್ನು 15 ದಿನಗಳೊಳಗಾಗಿ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು.

5. Pre-authorization ಸಲ್ಲಿಕೆಯನ್ನು ಫಲಾನುಭವಿಯು ದಾಖಲಾದ 24 ಗಂಟೆಗಳೊಳಗಾಗಿ ಸಲ್ಲಿಸುವುದು ಹಾಗೂ ಯಾವುದೇ ಹೆಚ್ಚಿನ ಮಾಹಿತಿ ನಿರೀಕ್ಷಿದಲ್ಲಿ (NMI) 48 ಗಂಟೆಗಳೊಳಗಾಗಿ ನೀಡುವುದು.
6. KASS ಫಲಾನುಭವಿಗಳಿಗೆ ಯಾವುದೇ ನಿರ್ದೇಶನ ಪತ್ರವಿಲ್ಲದೇ (Referral) ಹಾಗೂ ಪ್ಯಾಕೇಜ್ ದರದಲ್ಲಿ ಯಾವುದೇ ಹೊರಮಿತಿ ಇಲ್ಲದೇ ಚಿಕಿತ್ಸೆಯನ್ನು ನೀಡಲು ಅನುಮತಿಸಲಾಗಿದೆ.
7. ಯೋಜನೆಯಡಿಯಲ್ಲಿ ಸುಮಾರು 2000 ಚಿಕಿತ್ಸಾ ವಿಧಾನಗಳನ್ನು ನಿಗದಿಪಡಿಸಿದ್ದು ಚಿಕಿತ್ಸಾ ವಿಧಾನಗಳ ದರಗಳ ಜೊತೆಯಲ್ಲಿ ನಿಗದಿಪಡಿಸಿದ Implant ದರಗಳನ್ನು ಮರುಪಾವತಿಸಲಾಗುವುದು.
8. ಪ್ಯಾಕೇಜ್‌ನಲ್ಲಿ ಒಳಪಡದ Un-specified surgical procedure ಗಳನ್ನು ಪೂರ್ವಾನುಮತಿಯೊಂದಿಗೆ ಚಿಕಿತ್ಸೆ ನೀಡಲು ಅನುಮತಿಸಲಾಗಿದೆ. Un-specified ಪ್ಯಾಕೇಜ್ ದರಗಳನ್ನು ವೈದ್ಯಕೀಯ ಪರಿಣಿತರ ತಂಡ ನಿರ್ಧರಿಸಲಾಗುವುದು.
9. ಫಲಾನುಭವಿಗಳಿಗೆ ಚಿಕಿತ್ಸಾ ದರಗಳನ್ನು ನೌಕರರ ವರ್ಗದ ಅನುಸಾರವಾಗಿ ನಿಗದಿಪಡಿಸಲಾಗಿದ್ದು ಅದರಂತೆ ಅನುಸರಿಸುವುದು.

| | |
|---|---|
| ಗ್ರೂಪ್ ಎ ಮತ್ತು ಬಿ | ಖಾಸಗಿ ವಾರ್ಡ್ |
| ಗ್ರೂಪ್ ಸಿ | ಅರೆಖಾಸಗಿ ವಾರ್ಡ್ |
| ಗ್ರೂಪ್ ಡಿ | ಸಾಮಾನ್ಯ |

10. NABH, JCI ನಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಿಗೆ ಶೇ.15 % ರಷ್ಟು ಹೆಚ್ಚಿನ ಪ್ರೋತ್ಸಾಹಧನ ನೀಡಲಾಗುವುದು.
11. ಯೋಜನೆಗೆ ಒಳಪಡದ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಸದಸ್ಯರಿಗೆ ವೈದ್ಯಕೀಯ ಹಾಜರಾತಿ ನಿಯಮಗಳನ್ವಯ ವೈದ್ಯಕೀಯ ವೆಚ್ಚದ ಮರುಪಾವತಿ ನಿಯಮ ಆರು ತಿಂಗಳು ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಿಯಮಾನುಸಾರ ಚಾಲ್ತಿಯಲ್ಲಿರುತ್ತದೆ.
12. ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಬಂದ ದಿನಾಂಕ: ಅಕ್ಟೋಬರ್ 01,2025 ರಿಂದ ಪ್ರಸ್ತುತ ಜಾರಿಯಲ್ಲಿರುವ "ಜ್ಯೋತಿ ಸಂಜೀವಿನಿ" ಯೋಜನೆಯು ಸ್ಥಗಿತಗೊಳಿಸಲಾಗುವುದು. ಅದರಂತೆ ಜ್ಯೋತಿ ಸಂಜೀವಿನಿ ಯೋಜನೆಯಡಿಯಲ್ಲಿ ದಾಖಲಾದ ಫಲಾನುಭವಿಗಳಿಗೆ ಚಿಕಿತ್ಸೆಯನ್ನು ಪೂರ್ಣಗೊಳಿಸುವುದು ಹಾಗೂ ಯಾವುದೇ ಹೊಸ ದಾಖಲೆಗಳನ್ನು ನೊಂದಾಯಿಸಿಕೊಳ್ಳಬಾರದು.
13. ಯಾವುದೇ Pre-auth ಮತ್ತು Claim ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಡಾ,ರಕ್ಷಿತ್ - 9945310524 ಹಾಗೂ ಡಾ. ಆನಂದ ಆಳ್ವಾರ್ - 9448457295 ರವನ್ನು ಸಂಪರ್ಕಿಸಬಹುದು.

ಅದರಂತೆ, ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೊಂದಾಯಿತ ಆಸ್ಪತ್ರೆಗಳಲ್ಲಿ ಒಡಂಬಡಿಕೆ(MoU) ಪ್ರಕಾರ ಹಾಗೂ ಸು.ಆ.ಸು.ಟ್ರ ಮಾರ್ಗಸೂಚಿಯನುಸಾರ ಚಿಕಿತ್ಸೆಯನ್ನು ದಿನಾಂಕ: ಅಕ್ಟೋಬರ್ 01,2025 ರಿಂದ ನೀಡಲು ಈ ಮೂಲಕ ಸೂಚಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
ಬೆಂಗಳೂರು.

ಗೆ,
ವ್ಯವಸ್ಥಾಪಕರು,
ನೊಂದಾಯಿತ ಆಸ್ಪತ್ರೆಗಳು.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
6. ಜಿಲ್ಲೆಯ ಜಿಲ್ಲಾಧಿಕಾರಿಗಳು.
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
8. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು.
9. ಪ್ರಾದೇಶಿಕ ಸಮಾಲೋಚಕರು/ಸಹಾಯಕ ಪ್ರಾದೇಶಿಕ ಸಮಾಲೋಚಕರು/ ಜಿಲ್ಲಾ ಸಂಯೋಜಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು.